<u>ದಿಃ **19.09.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಶ್ರೀ.ಕೆ.ಹೆಚ್.ಇ ವಕೀಲರಿಂದಃ ಪ್ರತಿವಾದಿಯರ ಪರವಾಗಿಃ</u>

**24)** ನನ್ನ ಗಂಡ ಈರಪ್ಪ 25 ವರ್ಷದ ಹಿಂದೆ ಮೃತಪಟ್ಟಿದ್ದಾನೆ. ನನ್ನ ಗಂಡ ಈ ರಪ್ಪ ತನ್ನ ಊರಾದ ಮೈಲಾರದಲ್ಲಿ ಮೃತಪಟ್ಟಿದ್ದಾನೆ. ನನ್ನ ಗಂಡ ಮೃತಪಟ್ಟಾಗ ನಾನು ಮತ್ತು ನನ್ನ ಕುಟುಂಬದ ಎಲ್ಲ ಸದಸ್ಯರು ಹಾಗೂ ಊರಿನ ಜನರು ಇದ್ದರು. ಸದರಿ ಅಂತ್ಯಸಂಸ್ಕಾರದಲ್ಲಿ ನನ್ನ ಮತ್ತು ನನ್ನ ಕುಟುಂಬದವರನ್ನು ಹೊರತುಪಡಿಸಿ ಊರಿನವರು ಯಾರು ಯಾರು ಇದ್ದರು ಎಂದು ಗೊತ್ತಿಲ್ಲ. ನನ್ನ ಗಂಡ ಈರಪ್ಪನ ಅಂತ್ಯಸಂಸ್ಕಾರವನ್ನು ಸಾಯಂಕಾಲ ಮಾಡಿರುತ್ತಾರೆ. ನನ್ನ ಗಂಡನನ್ನು ಅಂತ್ಯಸಂಸ್ಕಾರ ಮಾಡುವಾಗ ಸ್ಮಶಾನದಲ್ಲಿ ಕುಣಿ ತೆಗೆದು ಆತನನ್ನು ಪೂಜೆ ಮಾಡಿ ಅಂತ್ಯಸಂಸ್ಕಾರ ಮಾಡಿರುತ್ತಾರೆ. ನನ್ನ ಗಂಡನನ್ನು ಅಂತ್ಯ ಸಂಸ್ಕಾರ ಮಾಡಬೇಕಾದರೆ ಸ್ಮಶಾನದಲ್ಲಿ ಕುಣಿ ತೆಗೆದು ಆತನನ್ನು ಪೂಜೆ ಮಾಡಿ ಅಂತ್ಯಸಂಸ್ಕಾರ ಮಾಡಿರುತ್ತಾರೆ. ನನ್ನ ಗಂಡನ ಅಂತ್ಯಸಂಸ್ಕಾರವನ್ನು ಸ್ಮಶಾನದಲ್ಲಿ ಮಾಡಿರುತ್ತಾರೆ, ಆದರೆ ಆತನ ಜಮೀನಿನಲ್ಲಿ ಮಾಡಿರುವದಿಲ್ಲ.

**25)** ನನ್ನ ಗಂಡ ಈರಪ್ಪ ಯಾವತ್ತೂ ಕೂಡ ಮೃತಪಟ್ಟಿಲ್ಲ ಮತ್ತು ಆತನನ್ನು ಯಾವುದೇ ಸ್ಮಶಾನದಲ್ಲಿ ಅಂತ್ಯಸಂಸ್ಕಾರ ಮಾಡಿಲ್ಲ ಮತ್ತು ನಾನು ನನ್ನ ಗಂಡ ಜೀವಂತ ಇರುವಾಗ ಆತನಿಗೆ ಸೇರಿದ ಆಸ್ತಿಗಳನ್ನು ಎತ್ತಿಹಾಕಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಟಿ.ಮಂಗಳಾ ಅಂದರೆ ನನ್ನ ಹೆಸರು ಇರಬಹುದು ಆದರೆ ಸಾಕ್ಷಿಯು ದಾವಾ ಆಸ್ತಿಯಲ್ಲಿ ಹಿಸ್ಸೇ ಬೇಕು ಎಂದು ಕೇಳುತ್ತಾರೆ. ರಿ.ಸ.ನಂಬರಃ 38 ಡಿ ನಿ.ಪಿ-13 ಪಹಣಿ ಪತ್ರಿಕೆಯ ಕಾಲಂ ನಂಬರಃ 9 ರಲ್ಲಿ ಇರುವ ಹೆಸರು ನನ್ನದು ಇರುವದಿಲ್ಲ ಮತ್ತು ಸದರಿ ಆಸ್ತಿ ನನಗೆ ಸೇರಿದ್ದು ಆಗಿರುವದಿಲ್ಲ. ನಾನು ದಾವಾ ಆಸ್ತಿಗಳಲ್ಲಿ ಹಿಸ್ಸೇ ಬೇಕು ಎಂದು ಆ ಕುರಿತಾಗಿ ದಾಖಲಾತಿಗಳನ್ನು ಈ ಪ್ರಕರಣದಲ್ಲಿ ನ್ಯಾಯಾಲಯಕ್ಕೆ

ಹಾಜರುಪಡಿಸಿದ್ದೇನೆ. ಸರ್ವೆ ನಂಬರಃ 38ಬಿ ಮತ್ತು ಸರ್ವೆ ನಂಬರಃ 241/ಬಿ ಈ ಎರಡೂ ಆಸ್ತಿಗಳ ಪಹಣಿ ಪತ್ರಿಕೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಅಂದರೆ ಸಾಕ್ಷಿಯು ನಾನು ಕೇವಲ ದಾವಾ ಆಸ್ತಿಗಳಲ್ಲಿ ಹಿಸ್ಸೇ ಮಾತ್ರ ಕೇಳುತ್ತೇನೆ ಎಂದು ನುಡಿಯುತ್ತಾರೆ.

**26)** ದಿನಾಂಕಃ 22.12.2011 ರಂದು ನಾನು ಸರ್ವೆ ನಂಬರಃ 38/ಡಿ ಹಾಗೂ ಸರ್ವೆ ನಂಬರಃ 241/ಬಿ ಎರಡೂ ಆಸ್ತಿಗಳನ್ನು ನನ್ನ ಹಿಸ್ಸೇಗೆ ತೆಗೆದುಕೊಂಡು ಸದರಿ ಹಕ್ಕು ಬಿಟ್ಟ ಪತ್ರದ ಪ್ರಕಾರ ಉಳಿದ ಆಸ್ತಿಗಳನ್ನು ಇನ್ನೂಳಿದ ದಾವಾ ಆಸ್ತಿಗಳಲ್ಲಿ ಪ್ರತಿವಾದಿಯರಿಗೆ ಹಕ್ಕು ಬಿಟ್ಟುಕೊಟ್ಟಿದ್ದೇನೆ ಅಂದರೆ ಸರಿಯಲ್ಲ. ದಿನಾಂಕಃ 22.12.2011 ರಂದು ನಾನು ಸರ್ವೆ ನಂಬರಃ 38/ಡಿ ಹಾಗೂ ಸರ್ವೆ ನಂಬರಃ 241/ಬಿ ಎರಡೂ ಆಸ್ತಿಗಳನ್ನು ಪಡೆದುಕೊಂಡು ಇನ್ನೂಳಿದ ಆಸ್ತ್ತಿಗಳಲ್ಲಿರುವ ಹಕ್ಕನ್ನು ಎಲ್ಲ ಪ್ರತಿವಾದಿಯರಿಗೆ ಬಿಟ್ಟುಕೊಟ್ಟು ಅದಕ್ಕೆ ಕುರಿತಾಗಿ ನೊಂದಾಯಿತ ಹಕ್ಕು ಬಿಟ್ಟು ಪತ್ರ ಕೊಟ್ಟು ಮಾಡಿಕೊಟ್ಟಿರುತ್ತೇನೆ ಅಂದರೆ ಸರಿಯಲ್ಲ. ಸದರಿ ನೊಂದಾಯಿತ ಹಕ್ಕುಬಿಟ್ಟ ಪತ್ರವನ್ನು ಮಾಡಿಕೊಡುವಾಗ ನಮ್ಮ ಊರಿನ ಪಂಚರು ಸಹ ಇದ್ದರು ಅಂದರೆ ಸರಿಯಲ್ಲ. ನನ್ನ ತವರೂರು ತಾವರಗುಂದಿ ಗ್ರಾಮ ಆಗಿರುತ್ತದೆ ಅಂದರೆ ಸರಿ.

**27)** ಹೆಚ್.ಚೆನ್ನಬಸಪ್ಪ ತಂದೆ ಕೆಂಚಪ್ಪ ಎನ್ನುವವರು ತಾವರಗುಂದಿ ಗ್ರಾಮದಲ್ಲಿ ಇದ್ದರು, ಅವರು ಈಗ ಮೃತಪಟ್ಟಿದ್ದಾರೆ. ಸದರಿ ಹಕ್ಕುಬಿಟ್ಟ ಪತ್ರವನ್ನು ನಾನು ಬರೆದುಕೊಡುವಾಗ ಹೆಚ್.ಚೆನ್ನಬಸಪ್ಪ ತಂದೆ ಕೆಂಚಪ್ಪ ಇವರು ಹಡಗಲಿಯ ನೊಂದಣಿ ಕಚೇರಿಯಲ್ಲಿ ಹಾಜರಿದ್ದು ನಾನು ಬರೆದುಕೊಟ್ಟಂತಹ ನೊಂದಾಯಿತ ಹಕ್ಕು ಬಿಟ್ಟ ಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಅಂದರೆ ನನಗೆ ಗೊತ್ತಿರುವದಿಲ್ಲ. ಸದರಿ ಹಕ್ಕುಬಿಟ್ಟ ಪತ್ರಕ್ಕೆ ಹೆಚ್.ಚೆನ್ನಬಸಪ್ಪ ತಂದೆ ಕೆಂಚಪ್ಪ ಇವರು ಸಾಕ್ಷಿದಾರರಾಗಿ ಸಹಿ ಮಾಡಿದ್ದರೂ ಸಹ ನಾನು ಆ ಕುರಿತಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಿನಾಂಕಃ 22.12.2011 ರಂದು ನಾನು ಬರೆದುಕೊಟ್ಟಂತಹ ಹಕ್ಕು ಬಿಟ್ಟ ಪತ್ರದಲ್ಲಿ ನನ್ನ ಮಗಳಾದ ನಂದಿತಾ ಈಕೆ ಅಲ್ಪವಯಿ ಇದ್ದು , ಆಕೆಯ ಸಂರಕ್ಷಣಾದಾರಳಾಗಿ ಆಕೆಗೆ ಸೇರಬೇಕಾದ ಆಸ್ತಿಯಲ್ಲಿ ಆಕೆಯ ಪರವಾಗಿ ನಾನು ಹಕ್ಕನ್ನು

ಬಿಟ್ಟುಕೊಟ್ಟಿರುತ್ತೇನೆ ಅಂದರೆ ಸರಿಯಲ್ಲ. ದಿನಾಂಕಃ 22.12.2011 ನೇ ಇಸ್ವಿಯಂದು ನಾನು ಮೇಲೆ ಹೇಳಿದ ಎರಡು ಆಸ್ತಿಗಳ ಕುರಿತಾಗಿ ಹಕ್ಕುಬಿಟ್ಟು ಪತ್ರ ಬರೆದುಕೊಡುವಾಗ ಎರಡು ಆಸ್ತಿಗಳ ಮೇಲೆ ಬ್ಯಾಂಕಿನ ಬೋಜಾ ಸಹ ಇದ್ದವು ಅಂದರೆ ಸರಿಯಲ್ಲ. ಸದರಿ ಹಕ್ಕುಬಿಟ್ಟ ಪತ್ರ ಬರೆದುಕೊಡುವಾಗ ಹಕ್ಕು ಬಿಟ್ಟ ಪತ್ರಕ್ಕೆ ಸಹಿ ಮಾಡಿದ ಸಾಕ್ಷಿದಾರರ ಸಮಕ್ಷಮ ನಾನೇ ಮೇಲೆ ಹೇಳಿದ ಎರಡು ಆಸ್ತಿಗಳಿಗೆ ಸಂಬಂಧಪಟ್ಟಂತೆ ಸಾಲವನ್ನು ಬಡ್ಡಿಸಮೇತ ಪ್ರತಿವಾದಿಗಳು ಕಟ್ಟಬೇಕು ಎಂದು ಮಾತುಕತೆಯಾಗಿರುತ್ತದೆ ಎಂದು ನನಗೆ ಗೊತ್ತಿರುವದಿಲ್ಲ.

**28)** ಸದರಿ ಮಾತುಕತೆ ಆದ ಪ್ರಕಾರ ಎಲ್ಲ ಪ್ರತಿವಾದಿಗಳು ಎರಡೂ ಆಸ್ತಿಗಳು ಅಂದರೆ ಸರ್ವೆ ನಂಬರಃ 38/ಡಿ ಹಾಗೂ ಸರ್ವೆ ನಂಬರಃ 241/ಬಿ ಎರಡೂ ಆಸ್ತಿಗಳ ಮೇಲೆ ತೆಗೆದುಕೊಂಡ ಸಾಲವನ್ನು ಪ್ರತಿವಾದಿಗಳು ಬಡ್ಡಿಸಮೇತ ಹಡಗಲಿ ಗ್ರಾಮದ ಪಿ.ಎಲ್.ಡಿ ಬ್ಯಾಂಕಿಗೆ ಮರುಪಾವತಿ ಮಾಡಿರುತ್ತಾರೆ ಅಂದರೆ ನನಗೆ ಗೊತ್ತಿರುವದಿಲ್ಲ. ಸದರಿ ಸಾಲವನ್ನು ಹಡಗಲಿ ಗ್ರಾಮದ ಪಿ.ಎಲ್.ಡಿ ಬ್ಯಾಂಕಿಗೆ ಎಲ್ಲ ಪ್ರತಿವಾದಿಯರು ಬಡ್ಡಿ ಸಮೇತ ದಿನಾಂಕಃ 27.06.2020 ರಂದು ರೂ.4,54,000/- ಗಳನ್ನು ಮರುಪಾವತಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವದಿಲ್ಲ. ಈ ಎಲ್ಲ ವಿಚಾರ ನನಗೆ ಗೊತ್ತಿದ್ದರೂ, ನಾನು ಉದ್ದೇಶಪೂರ್ವಕವಾಗಿ ಆ ಕುರಿತಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಿನಾಂಕಃ 22.12.2011 ನೇ ಇಸ್ವಿಯಂದು ಸರ್ವೆ ನಂಬರಃ 38/ಡಿ ಹಾಗೂ ಸರ್ವೆ ನಂಬರಃ 241/ಬಿ ಎರಡೂ ಆಸ್ತಿಗಳನ್ನು ಪಡೆದುಕೊಂಡು ಉಳಿದ ಆಸ್ತಿಗಳ ಮೆಲೆ ಇರುವ ನನ್ನ ಹಕ್ಕನ್ನು ಪ್ರತಿವಾದಿಯರಿಗೆ ನೊಂದಾಯಿತ ಹಕ್ಕು ಬಿಟ್ಟ ಪತ್ರದ ಮುಖಾಂತರ ಬಿಟ್ಟುಕೊಟ್ಟರೂ ಸಹ ನಾನು ಆ ಕುರಿತಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಮಗಳಾದ ನಂದಿತಾ ಈಕೆಗೆ ಈಗ ಪ್ರಸ್ತುತವಾಗಿ 27 ವರ್ಷ ವಯಸ್ಸು ಇರುತ್ತದೆ ಅಂದರೆ ಇರಬಹುದು. ಆಕೆಗೆ 18 ವರ್ಷ ಆದ ನಂತರ ಈ ದಾವೆಯನ್ನು ಸಲ್ಲಿಸುವ ಷರತ್ತು ಇದ್ದರೂ ಸಹ ನಾನು ಅವಧಿಯ ಒಳಗಾಗಿ ಈ ದಾವೆಯನ್ನು ಸಲ್ಲಿಸಿಲ್ಲ ಅಂದರೆ ಸರಿಯಲ್ಲ.

30)

<u>ಮರು ವಿಚಾರಣೆ ಇಲ್ಲ.</u>

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ,
ಹಾವೇರಿ.